ಕನ್ನಡ / KANNADA

ಪತ್ರಿಕೆ II / Paper II

(ಸಾಹಿತ್ಯ) / (LITERATURE)

ಮೇಳೆ : ಮೂರು ಗಂಟೆ *Time Allowed : **Three** Hours*	ಗರಿಷ್ಠ ಅಂಕಗಳು : **250** *Maximum Marks : **250***

ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ.

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು ಭಾಗಗಳಲ್ಲಿ** ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5** ಕ್ಕೆ ಉತ್ತರಿಸುವುದು ಕಡ್ಡಾಯ ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲಿಯೇ** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಠ ಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

QUESTION PAPER SPECIFIC INSTRUCTIONS

Please read each of the following instructions carefully before attempting questions :

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** from each section.*

The number of marks carried by a question / part is indicated against it.

*Answers must be written in **KANNADA** (Kannada Script).*

Word limit in questions, wherever specified, should be adhered to.

Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

Optional Province · optionalprovince.com

SECTION A

Q1. ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ, ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ. (ಪ್ರತಿಯೊಂದು 150 ಪದಗಳ ಮೇಲೆ) ***10×5=50***

(a) ಕಲಿಯನೆ ಪಂದೆ ಮುಟ್ಟಿ ಕಡುವಂಕಿಯನೊಳ್ಗಲಿ ಮಾಟ್ಟಿ ತಕ್ಕನಂ
ಪೊಲೆಯನೆ ಮಾಟ್ಟಿ ವಲಂ ಪೊಲೆಯನಂ ನೆಱೆತಕ್ಕನೆ ಮಾಟ್ಟಿ ತಮ್ಮೊಳ
ಗ್ಗಲಿಸಿ ಪೊದದ್ದಿ ಪರ್ವಿದ ವಿವೇಕತೆಯಂ ನೃಪಚಿತ್ತವೃತ್ತಿಸಂ
ಚಲಮದಱೆಂದ ಮೋಲಗಿಸಿ ಬಾಮ್ಪಿದೆ ಕಷ್ಟ ಮಳಾಧಿನಾಥರಂ ।। *10*

(b) ರಾತ್ರಿಯೆಂಬ ಹುತ್ತಿನೊಳಗೆ ನಿದ್ರೆಯೆಂಬ ರಾಹು ಹೆಡೆಯೆತ್ತಿ
ಕತ್ತಲೊಡನೆ ಅಂಜನಾಸಿದ್ಧರ ಅಂಜನವು ಹಾರಿತ್ತು
ಘಟಿಕಾಸಿದ್ದರ ಘಟಿಕೆಯುರುಳಿತ್ತು
ಯಂತ್ರಗಳ ಯಂತ್ರ ಎದ್ದು ಹೋಯಿತ್ತು
ಔಷದಿಗಳ ಔಷದವನಾರಡಿಕೊಂಡಿತ್ತು
ಸರ್ವ ವಿದ್ಯಾ ಮುಖದ ಜ್ಯೋತಿನಂದಿತ್ತು
ಈ ವಿಷಯದ ಲಹರಿಯಲ್ಲಿ ಮೂರು ಲೋಕದವರೆಲ್ಲರೂ
ಮೂರ್ಛಿತರಾದರು ಕಾಣಾ ಗುಹೇಶ್ವರಾ ।। *10*

(c) ಸಲಹಿದೊಡೆಯನ ಜೋಳವಾಳಿಗೆ
ತಲೆಯ ಮಾಮಿವುದೊಂದು ಪುಣ್ಯದ
ಫಲವು ಮರಣದ ಹೊತ್ತು ಕೃಷ್ಣನ ಕಾಬ ಸುಕೃತದ ಫಲ ।
ಇಳೆಯ ಮೇಲಿನದಲ್ಲದಾರಿಗೆ
ಫಲಿಸುವುದು ತಾ ಧನ್ಯನೆನುತೆವೆ
ಹಳಚದಸುರಾಂತಕನ ನಿಕ್ಷಿಸುತಿರ್ದನಾ ಕರ್ಶಿ । *10*

(d) ಒಂಬತ್ತು ಎಜ್ಜೆದೊಳೊಸರುವ ಹೊಲಸದು
ತುಂಬಿ ತುಳುಕುವ ಕೊಡವಾಗಿರಲು
ಇಂಬಿಲ್ಲದೆ ಹೊಲೆಗೊಂಡ ಕಾವಿನಲಿ ಬಂದಂಥ
ಡಂಬಕ ನನನಿನ್ಯಾತರ ಕುಲವಯ್ಯ । *10*

Optional Province · optionalprovince.com

(e) ಆಗಾಗ ದೇಹ ಚೀರಾತ್ಮ ಬೇಕೆಂದು ವಿ ।
ಭಾಗಿಸಿ ತನ್ನ ತಾ ನೆಮ್ಮಿ ।।
ಭೋಗಿಸಿದರೆ ಕರ್ಮ ಬಂಧವಿಲ್ಲಾಗಿ ಯಾ ।
ಭೋಗಿ ತಾನೇ ಯೋಗಿಯತ್ತೆ ।। 10

Q2. (a) "ವಿಕ್ರಮಾರ್ಜುನ ವಿಜಯಂ – ಕ್ಷಾತ್ರ ಜೀವನಕ್ಕೆ ಹಿಡಿದ ಕೈಗನ್ನಡಿ –" ಈ ಹೇಳಿಕೆಯನ್ನು ಸಮರ್ಥಿಸಿ. 20

(b) "ವಡ್ಡಾರಾಧನೆಯು ಜೈನ ತತ್ತ್ವಗಳ ಒಂದು ಕೋಶವಾಗಿದೆ –" ನಿಮಗಿಟ್ಟಿರುವ ಪಠ್ಯದ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಿ. 20

(c) ನಡುಗನ್ನಡ ಸಾಹಿತ್ಯದ ವೈಚಾರಿಕ ಆಕೃತಿಗಳಾದ ವಚನಗಳು ಮಾನವೀಯತೆಯತ್ತ ನಡೆವ ನಡೆಯನ್ನು ವಿಶದೀಕರಿಸಿ. 10

Q3. (a) ಜನಸಮ್ಮುಖ ಸಾಹಿತ್ಯದ ಲಕ್ಷಣಗಳನ್ನು ಕನಕದಾಸರ ಕೀರ್ತನೆಗಳ ಹಿನ್ನೆಲೆಯಲ್ಲಿ ಪರಾಮರ್ಶಿಸಿ. 20

(b) 'ನಂಬಿಮಣ್ಣನ ರಗಳೆಯೊಂದು 'ಕಾವ್ಯಾತ್ಮಕ ಚರಿತೆ' (Poetic biography)' ಚರ್ಚಿಸಿ. 20

(c) "ವ್ಯಾಸಭಾರತದ ಕರ್ಣನಿಗಿಂತಲೂ ಕುಮಾರವ್ಯಾಸ ಭಾರತದ ಕರ್ಣನು ಉದಾತ್ತನು" ವಿಶ್ಲೇಷಿಸಿ. 10

Q4. (a) ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ಭರತೇಶವೈಭವ' ಕಾವ್ಯಕ್ಕೆ ಇರುವ ವೈಶಿಷ್ಟ್ಯತೆಯನ್ನು ವಿವರಿಸಿ. 20

(b) ಜೀವದೇಹದ ನಡುವಿನ ಸಂಬಂಧ ವಚನಗಳಲ್ಲಿ ನಿರ್ವಹಣೆಗೊಂಡಿರುವ ಬಗೆಯನ್ನು ಸೋದಾಹರಣವಾಗಿ ವಿವರಿಸಿ. 20

(c) 'ಶೂದ್ರ ತಪಸ್ವಿ' ನಾಟಕದಲ್ಲಿ ಚಿತ್ರಿತವಾಗಿರುವ ಸಾಮಾಜಿಕ ಸಮಸ್ಯೆಯ ಸಮಕಾಲೀನತೆಯನ್ನು ಚರ್ಚಿಸಿ. 10

Optional Province · optionalprovince.com